
ಎಂದು ಹೇಳಬೇಕು ಎನ್ನುವ ಹೊತ್ತಿನಲ್ಲೇ ಅದರ ಜೋಡಿ ಪದವೋ ಎನ್ನುವಂತೆ ಪತಿದೇವರು ಎನ್ನುವುದು ಮನಸ್ಸಿಗೆ ಬರುವುದು, ಯಜಮಾನರು ಎನ್ನುವ ಸ್ಥಾಪಿತ ಪದ ಬಳಸುವಲ್ಲಿ ಮನಸ್ಸು ಕುಗ್ಗುವ, ಅದರ ಬಗೆಗೆ ಅಪಾರ ಅಸಹನೆ ಮೂಡುವ, ಇಂಥ ಎಲ್ಲ ಸಣ್ಣ ಸಣ್ಣ ವಿವರಗಳ ಮೂಲಕವೇ ಹೆಣ್ಣಿನ ಸ್ವಪ್ರಜ್ಞೆ ಗಂಡಾಳಿಕೆಯ ವಿರುದ್ಧ ಬಂಡೇಳುವುದನ್ನು ಸಹ ಜಾತಿಸಹಜ ನೆಲೆಯಲ್ಲಿ ಈ ಕಥೆ ನಿರೂಪಿಸುತ್ತದೆ. ಆದರೆ ಈ ವಿವರಗಳ ಜೊತೆಗೇ ಕಥೆ ಹೆಣ್ಣಿನ ವಾಸ್ತವತೆಯನ್ನೂ ವಿವರಗಳಲ್ಲಿ ಕಟ್ಟಿಕೊಡುತ್ತದೆ. ಅನ್ಯೋನ್ಯವಾಗಿದ್ದ ದಾಂಪತ್ಯದಲ್ಲಿ, ಆ ಪ್ರೀತಿಗಾಗಿ ತಾನು ತಾಜ್ ಮಹಲ್ ಬೇಕಾದರೂ ಕಟ್ಟಿಸಬಲ್ಲೆ ಎನ್ನುವ ಗಂಡನ ಗೆಳೆಯ, ಹೆಂಡತಿ ಸತ್ತರೆ ಮತ್ತೊಬ್ಬ ಹೆಂಡತಿ ಸಿಕ್ಕುತ್ತಾಳೆ ಎನ್ನುವುದನ್ನು ಅಂಗಡಿಯಿಂದ ಅಕ್ಕಿ, ಬೇಳೆ ತರುವಷ್ಟು ಸಸ್ತಾದಲ್ಲಿ, ಸಸಾರವಾಗಿ ತರಬಹುದು ಎನ್ನುವ ಗಂಡ, ಇವರಿಬ್ಬರನ್ನೂ ಪಕ್ಕಪಕ್ಕದಲ್ಲಿಟ್ಟು ನೋಡುತ್ತಿರುವಾಗಲೇ ಗಂಡನ ಗೆಳೆಯನ ಹೆಂಡತಿ ಸತ್ತು ನಲವತ್ತನೆಯ ದಿನಕ್ಕೆ ಮತ್ತೊಬ್ಬಳನ್ನು ಆತ ಮದುವೆಯೇ ಆಗಿಬಿಡುತ್ತಾನೆ. ಹೆಣ್ಣೆಂದರೆ ಗಂಡಿಗೆ ಏನು ಎನ್ನುವ ಪ್ರಶ್ನೆ ಕಥೆಯ ನಾಯಕಿಯಲ್ಲಿ ಉಳಿದೇ ಬಿಡುತ್ತದೆ.

ಬಾನು ಅವರ ಬಹುಚರ್ಚಿತ 'ಒಮ್ಮೆ ಹೆಣ್ಣಾಗು ಪ್ರಭುವೆ' ಕಥೆಗೆ ಬರುವ ಹೊತ್ತಿಗೆ ಬಾನು ಅವರ ದೃಷ್ಟಿ ಧೋರಣೆಯಲ್ಲಿ ಸಕಾರಣವಾದ ಬದಲಾವಣೆಗಳಾಗಿವೆ. ಮನುಷ್ಯರನ್ನು, ಮೌಲ್ಯವ್ಯವಸ್ಥೆಯನ್ನು ಬದಲಿಸಲು ಸಾಧ್ಯವೇ ಇಲ್ಲವೇನೋ ಎನ್ನಿಸಿ ಈ ಕಥೆಯ ನಾಯಕಿ ಸ್ವತಃ ದೇವರನ್ನೇ 'ಅಯ್ಯಾ, ಒಮ್ಮೆ ಹೆಣ್ಣಾಗಿ ಭೂಮಿಗೆ ಬಂದು, ನಮ್ಮ ಬದುಕನ್ನು ಬದುಕು. ಆಗ ಮಾತ್ರ ಹೆಣ್ಣಿನ ಸಂಕಷ್ಟಗಳು ನಿನಗೆ ಅರ್ಥವಾಗಬಹುದು' ಎಂದು ಆರ್ದ್ರವಾಗಿ ಮನವಿ ಸಲ್ಲಿಸುತ್ತಾಳೆ. ಇಲ್ಲಿ ಬಾನು 'ಒಮ್ಮೆ ಹೆಣ್ಣಾಗು ದೇವರೇ' ಎಂದು ಶೀರ್ಷಿಕೆ ಕೊಡಬಹುದಿತ್ತು, ಆದರೆ, 'ಪ್ರಭುವೇ' ಎಂದು ಸಂಬೋಧಿಸುವುದರಲ್ಲಿಯೇ ಇಡೀ ಕಥೆಗೆ, ಕಥಾವಸ್ತುವಿಗೆ ಅನುರಣಿಸುವ ಧ್ವನಿಶಕ್ತಿಯನ್ನು ತಂದುಕೊಡುತ್ತಾರೆ. ಪ್ರಭು ಎಂದರೆ ಅಧಿಕಾರ ಕೇಂದ್ರ. ಇಲ್ಲಿ ಪ್ರಭು ಎನ್ನುವ ಸಂಬೋಧನೆ ಗಂಡೂ ಹೌದು, ದೇವರೂ ಹೌದು. ಗಂಡು ಮತ್ತು ದೇವರು ಇಬ್ಬರೂ




ಸೇರಿಯೇ ಕಟ್ಟಿರುವ ಶ್ರೇಣೀಕೃತ, ಲಿಂಗಾಧಾರಿತ ವ್ಯವಸ್ಥೆಯೂ ಹೌದು. ಆಳುವುದು ಮಾತ್ರ ಗೊತ್ತಿರುವವರಿಗೆ ಆಳಿಸಿಕೊಳ್ಳುವವರ ಅವಮಾನ, ನೋವು ಅರ್ಥವಾಗಲಾರದು. ಆಳಿಸಿಕೊಂಡಾಗ ಮಾತ್ರ ಆಳುವವರ ಕ್ರೌರ್ಯ ಮತ್ತು ಆಳಿಸಿಕೊಳ್ಳುವವರ ದೈನ್ಯ ಅರ್ಥವಾದೀತು. ದೇವರನ್ನೂ ತನ್ನ ಅಧಿಕಾರಕ್ಕೆ ಬಳಸಿಕೊಂಡಿರುವ ಗಂಡಿಗೆ ಅಥವಾ ಗಂಡಿನ ಇನ್ನೊಂದು ರೂಪವೇ ಆಗಿರುವ ದೇವರಿಗೆ ಹೆಣ್ಣಿನ ಅವಸ್ಥೆ ಅರ್ಥವಾಗಬೇಕೆಂದರೆ ಹೆಣ್ಣಾಗದೇ, ಅವಳನ್ನು ಒಳಗೊಳ್ಳದೇ ಬೇರೆ ದಾರಿಯೇ ಇಲ್ಲ. ಹೀಗೆ ಹೇಳುತ್ತಿರುವಾಗಲೇ ಕಥೆ ಇನ್ನೊಂದು ಸಂಗತಿಯನ್ನೂ ಸೂಚಿಸುತ್ತಿದೆ. ಮನುಷ್ಯರಾಗಿ ಮನುಷ್ಯರೇ ಅರ್ಥಮಾಡಿಕೊಳ್ಳದ್ದನ್ನು ದೇವರು ಅರ್ಥಮಾಡಿಕೊಳ್ಳಬಹುದೆ? ದೇವರ ಪರಿಕಲ್ಪನೆಯನ್ನೇ ಈ ಕಥೆ ತೀವ್ರವಾದ ಶೋಧಕ್ಕೆ ಒಡ್ಡುತ್ತದೆ. ಆದರೆ ಇಷ್ಟಿದ್ದೂ ಕಥೆ ಹೆಣ್ಣನ್ನು ಅರ್ಥಮಾಡಿಕೊಳ್ಳಬಲ್ಲ, ತಾನು ಅರ್ಥಮಾಡಿಕೊಂಡು ಗಂಡನ್ನೂ ಬದಲಿಸಬಲ್ಲ